ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:893/2024
ಸಿ.ಡಬ್ಲ್ಯು3 ಪಿ.ಡಬ್ಯೂ : 2

| | |
|---|---|
| ಸಾಕ್ಷಿದಾರರ ಹೆಸರು | ಪ್ರಕಾಶ್ ಸಾಲಿಯಾನ್ |
| ತಂದೆಯ ಹೆಸರು | ಚಂದ್ರು |
| ವಯಸ್ಸು | 55 ವರ್ಷ |
| ಉದ್ಯೋಗ | ಪಿ. ಎಸ್ ಐ |
| ವಾಸಸ್ಥಳ | ಉಡುಪಿ |

ದಿನಾಂಕಃ 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

2022ರ ಜನವರಿ ತಿಂಗಳಿನಿಂದ 2023ರ ಆಗಸ್ಟ್ ತಿಂಗಳಿನ ವರೆಗೆ ಪಡುಬಿದ್ರಿ ಪೊಲೀಸ್ ಠಾಣೆಯಲ್ಲಿ ಪಿ. ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ. ಚಾಸಾ 2ರವರು ಅಪಘಾತ ವೇಳೆ ನಮ್ಮ ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರಾಗಿದ್ದರು ಚಾಸಾ 4ರವರು ನಮ್ಮ ಠಾಣೆಯಲ್ಲಿ ಎ. ಎಸ್ ಐ ಆಗಿದ್ದರು. ದಿಃ 20-09-2022 ರಂದು ನಾನು ಗಸ್ತಿನಲ್ಲಿ ಇರುವ ವೇಳೆ ಚಾಸಾ 2ರವರು ಸುಮಾರು ಸಂಜೆ 5.50 ವೇಳೆಗೆ ಕರೆ ಮಾಡಿ ಕಣ್ಣಂಗಾರಿಗೆ ಬರುವಂತೆ ಸೂಚನೆ ನೀಡಿದರು. ಠಾಣೆಗೆ ಕರೆ ಮಾಡಿ ಚಾಸಾ 4ರವರನ್ನು ನಾನು ಇದ್ದ ಸ್ಥಳಕ್ಕೆ ಕರೆಯಿಸಿಕೊಂಡು, ಅವರನ್ನು ಕರೆದುಕೊಂಡು ಕಣ್ಣಂಗಾರಿಗೆ ಹೋದೆನು. ಚಾಸಾ 1ರವರು ಸುಮಾರು 6.20ರ ಸಮಯಕ್ಕೆ ಅಲ್ಲಿಗೆ ಬಂದರು. ದೊರೆತ ಮಾಹಿತಿಯನ್ನು ಆಧರಿಸಿ ಚಾಸಾ 1ರವರೊಂದಿಗೆ ಕಣ್ಣಂಗಾರು ಬೈಪಾಸಿನಲ್ಲಿ ಇರುವ ಕಂಪ್ಲೆಕ್ಸ್ ನ ಒಳಗೆ ನೋಡಿದ ಒಂದು ಮನೆಯ ವರಾಂಡದಲ್ಲಿ ಬೆಳ್ತಿಗೆ ಮತ್ತು ಕುಚ್ಚಿಗೆ ತುಂಬಿರುವ ಚೀಲಗಳ ದಾಸ್ತಾನು ಇತ್ತು. ಅದರ ಪಕ್ಕದಲ್ಲಿ ದಾಸ್ತಾನು ಕೋಣೆ ಇದ್ದು ಅದರಲ್ಲಿಯೂ ಬೆಳ್ತಿಗೆ ಮತ್ತು ಕುಚ್ಚಿಗೆ ಅಕ್ಕಿ ಇರುವ ಚೀಲಗಳು ಇರುವುದು ಕಂಡು ಬಂತು.

ಕೆಲಸಗಾರರಾದ ಚಾಸಾ 5 ಮತ್ತು 6 ರವರು ತೂಕದ ಯಂತ್ರದ ಮೂಲಕ ಅಕ್ಕಿಯನ್ನು ತೂಕ ಮಾಡಿ ಚೀಲಕ್ಕೆ ತುಂಬುವ ಕೆಲಸ ಮಾಡುತ್ತಿದ್ದರು. ಚಾಸಾ 1 ರವರು ಅಕ್ಕಿಯನ್ನು ಪರಿಶೀಲಿಸಿದಾಗ, ಅಕ್ಕಿಯು ಸರ್ಕಾರವು ಅನ್ನಭಾಗ್ಯ ಯೋಜನೆ ಅಡಿಯಲ್ಲಿ ವಿತರಿಸುವ ಅಕ್ಕಿಗೆ ಸಾಮ್ಯತೆ ಇರುವುದನ್ನು ದೃಡಪಡಿಸಿಕೊಂಡರು. ಮನೆಯಲ್ಲಿ ಇದ್ದ ಆಯಿಶಾ ಮತ್ತು ಹಸಿನಾ ರವರು ಮನೆಯು ಮಹಮ್ಮದ್ ಶಫೀಕ್ ರವರಿಗೆ ಸೇರಿದ್ದು ಎಂದು ತಿಳಿಸಿದರು.

ಮಹಮ್ಮದ್ ಶಫೀಕ್ ರವರ ಮನೆಯ ಎದುರು ಇದ್ದ ದಾಸ್ತಾನು ಕೋಣೆಯಲ್ಲಿ 50 ಕೆಜಿ ಸಾಮರ್ಥ್ಯದ ಹಾಗೂ ಅನ್ನ ಭಾಗ್ಯ ಯೋಜನೆ ಅಡಿ ಸರಬರಾಜು ಆಗುವ ಚಿಹ್ನೆ ಇರುವ 33 ಗೋಣಿ ಚೀಲಗಳು ಇದ್ದವು. ಅವುಗಳಲ್ಲಿ 50 ಕೆಜಿ ಬೆಳ್ತಿಗೆ ಅಕ್ಕಿ ತುಂಬಿಸಿ ಹೊಲಿದು ಇಟ್ಟಿರುವ 4 ಗೋಣಿ ಚೀಲಗಳು ಇದ್ದವು. ತಲಾ 50 ಕೆಜಿ ಕುಚ್ಚಿಗೆ ಅಕ್ಕಿ ತುಂಬಿರುವ 192 ಬಿಳಿ ಮತ್ತು ಕೆಂಪು ಬಣ್ಣದಿಂದ ಕೂಡಿದ ಪಾಲಿಥಿನ್ ಚೀಲಗಳು, ತಲಾ 20 ಕೆಜಿ ತೂಕದ ಕುಚ್ಚಲಕ್ಕಿ ತುಂಬಿರುವ 31 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 28 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 2 ಪಾಲಿಥಿನ್ ಚೀಲಗಳು, ತಲಾ 30 ಕೆಜಿ ಅಕ್ಕಿ ತುಂಬಿರುವ 10 ಪಾಲಿಥಿನ್ ಚೀಲಗಳು ಇದ್ದವು.

ಪಂಚರ ಸಮಕ್ಷಮದಲ್ಲಿ ನೋವಾ ಕಂಪನಿಯ ಡಿಜಿಟಲ್ ತೂಕದ ಯಂತ್ರದ ಮೂಲಕ ತೂಕ ಮಾಡಿ ಪಂಚನಾಮೆಯನ್ನು ಜರುಗಿಸಿ ವಶಕ್ಕೆ ಪಡೆದುಕೊಂಡರು. ನೋವಾ ಕಂಪನಿಯ ಡಿಜಿಟಲ್ ತೂಕದ ಯಂತ್ರ, ಹಾಗೂ ರೇವು ಕಂಪನಿಯ ಹೊಲಿಗೆ ಯಂತ್ರವನ್ನು ಕೂಡ ಜಪ್ತು ಮಾಡಿಕೊಂಡರು.

ಸ್ಥಳದಲ್ಲಿ ಪಂಚನಾಮೆಗೆ ಸಹಿ ಮಾಡಿದೆನು. ಸಾಕ್ಷಿಯವರು ಪಂಚನಾಮೆಯನ್ನು ಮತ್ತು ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ಈಗಾಗಲೇ ನಿಪಿ. 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯವರ ಸಹಿಯನ್ನು ನಿಪಿ. 2 ಬಿ ಎಂದು ಗುರುತಿಸಲಾಯಿತು.

ಸಾಕ್ಷಿಯವರು ಮೂರು ಭಾವಚಿತ್ರಗಳನ್ನು ನೋಡಿ ನಾವು ಆ ದಿನ ಹೋದಾಗ ಇದ್ದ ಸ್ವತ್ತುಗಳು ಇದೇ ಎಂದು ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ. 7 ಎಂದು ಗುರುತಿಸಲಾಗಿದೆ. ಸಾಕ್ಷಿಯವರು ಹೊಲಿಗೆ ಯಂತ್ರ ಹಾಗೂ ತೂಕದ ಯಂತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮೂ.ಮಾ 1 ಮತ್ತು 2 ಎಂದು ಗುರುತಿಸಲಾಗಿದೆ. ಈ ಬಗ್ಗೆ ದಿಃ 21-09-2022 ರಂದು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯವರನ್ನು ನಾನು ನೋಡಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿಯವರ ಪರವಾಗಿ ಶ್ರೀ ಹೆಚ್ ಹೆಚ್ ಕೆ ವಕೀಲರಿಂದಃ**

ಚಾಸಾ 2 ರವರು ನಿಮಗೆ ಎಷ್ಟು ಗಂಟೆಗೆ ಕರೆ ಮಾಡಿ ಮಾಹಿತಿಯನ್ನು ನೀಡಿದರು ಎಂದರೆ ಸಂಜೆ 5.50 ರ ಸಮಯಕ್ಕೆ ನೀಡಿದರು. ಘಟನೆಯ ವೇಳೆ ನಿಮ್ಮ ಠಾಣೆಯಲ್ಲಿ ಎಷ್ಟು ಜನ ಪಿ. ಎಸ್.ಐ ಇದ್ದರು ಎಂದರೆ ಇಬ್ಬರು ಪಿ. ಎಸ್ ಐ ಗಳು ಇದ್ದರು. ಆ ವೇಳೆ ಯಾರು ಎಲ್ ಆ್ಯಂಡ್ ಒ ಆಗಿದ್ದರು, ಹಾಗೂ ತನಿಖೆಗೆ ಯಾರು ಇದ್ದರು ಎಂದರೆ ನಾನು ತನಿಖೆಗೆ ಇದ್ದೆನು. ಚಾಸಾ 2 ರವರು ನಿಮ್ಮನ್ನು ಕರೆಯುವ ವೇಳೆ ನೀವು ಯಾವ ಕೆಲಸಕ್ಕೆ ನಿಯೋಜನೆ ಆಗಿದ್ದೀರಿ ಎಂದರೆ ಗಸ್ತು ಕೆಲಸವನ್ನು ಮಾಡುತ್ತಿದ್ದೆನು. ನೀವು ಗಸ್ತು ಕೆಲಸ ಮಾಡುತ್ತಿದ್ದ ಬಗ್ಗೆ ಠಾಣೆಯಲ್ಲಿ ದಾಖಲೆ ಇದೆ ಎಂದರೆ ಹೌದು. ಆ ದಿನ ಎಷ್ಟು ಅಧಿಕಾರಿಗಳು ಗಸ್ತು ಕಾರ್ಯವನ್ನು ಮಾಡುತ್ತಿದ್ದೀರಿ ಮತ್ತು ಯಾವ ವಾಹನದಲ್ಲಿ ಮಾಡುತ್ತಿದ್ದೀರಿ

ಎಂದರೆ ನನ್ನ ಸ್ವಂತ ವಾಹನದಲ್ಲಿ ನಾನು ಒಬ್ಬನೇ ಗಸ್ತು ಕೆಲಸ ಮಾಡುತ್ತಿದ್ದೆನು. ಯಾವ ವಾಹನ ಎಂದರೆ ಕೆಎ 20 ಇಟಿ 8172 ಸಂಖ್ಯೆಯ ದ್ವಿ ಚಕ್ರ ವಾಹನ ಅಗಿತ್ತು.

ಚಾಸಾ 2 ರವರು ಕರೆದಾಗ ನೀವು ಅದೇ ವಾಹನದಲ್ಲಿ ಅವರು ಹೇಳಿದ ಸ್ಥಳಕ್ಕೆ ಹೋಗಿರುತ್ತೀರಾ ಎಂದರೆ ಚಾಸಾ 4 ರವರನ್ನು ಬರಮಾಡಿಕೊಂಡು ನನ್ನ ವಾಹನದಲ್ಲಿಯೇ ಕರೆದುಕೊಂಡು ಹೋದೆನು. ನೀವು ಹೋಗಿದ್ದ ಸ್ಥಳವು ರಾಷ್ಟ್ರೀಯ ಹೆದ್ದಾರಿಯಲ್ಲಿ ಇದೆಯೇ ಎಂದರೆ ರಾಷ್ಟ್ರೀಯ ಹೆದ್ದಾರಿಯಿಂದ ಸುಮಾರು 100 ಮೀ ಒಳಗೆ ಇದೆ.

ನೀವು ಹೋದ ವೇಳೆ ಚಾಸಾ 2 ರವರು ಸ್ಥಳದಲ್ಲಿ ಇದ್ದರೇ ಎಂದರೆ ಬೈಪಾಸಿನಲ್ಲಿ ಇದ್ದರು ನಾವು ಹೋದ ನಂತರ ನಮ್ಮನ್ನು ಚಾಸಾ 1 ರವರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದರು. ಚಾಸಾ 2 ರವರಿಗೆ ಘಟನೆಯ ಬಗ್ಗೆ ಯಾವರು ಮಾಹಿತಿಯನ್ನು ನೀಡಿದ್ದರು ಎಂದರೆ ಗೊತ್ತಿಲ್ಲ. ನೀವು ಹೇಳಿದ ಸ್ಥಳಕ್ಕೆ ಹೋದಾಗ ಸುಮಾರು 6.30 ರ ಸಮಯವಾಗಿತ್ತೇ ಎಂದರೆ ಹೌದು. ನೀವು ಹೇಳುವ ಜಾಗವು ಕಾಂಪೌಂಡ್ ಹಾಕಿರುವ ಭದ್ರವಾಗಿರುವ ಸ್ಥಳವಾಗಿರುತ್ತದೆಯೇ ಎಂದರೆ ಹೌದು. ಶೋಧನಾ ವಾರಂಟನ್ನು ನೀವು ಪಡೆದಿರುತ್ತೀರಾ ಎಂದರೆ ನಾನು ಚಾಸಾ 1 ಮತ್ತು 2 ರವರೊಂದಿಗೆ ಹೋಗಿದ್ದೆನು ಅವರು ಶೋಧನಾ ವಾರಂಟನ್ನು ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

ದಾಸ್ತಾನು ಇದ್ದ ಚೀಲಗಳ ಪೈಕಿ ಪ್ರತಿಯೊಂದು ಚೀಲದಲ್ಲಿದ್ದ ಅಕ್ಕಿಯನ್ನು ತೂಕ ಮಾಡಿ ಎಷ್ಟು ಇರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಇಲ್ಲ. ಅನ್ನಭಾಗ್ಯ ಯೋಜನೆಯ ಅಡಿಯಲ್ಲಿ ನೀಡುವ ಅಕ್ಕಿ ಅಥವಾ ಹೊರಗಡೆ ಸಿಗುವ



ಅಕ್ಕಿಯಾಗಿರುತ್ತದೆಯೇ ಎಂದು ನಿಮಗೆ ಅನುಭವ ಇರುತ್ತದೆಯೇ ಎಂದರೆ ಇಲ್ಲ. ಚಾಸಾ 1 ರವರು ಮಾದರಿ ಅಕ್ಕಿಯನ್ನು ಸ್ಥಳ ದಲ್ಲಿ ಇದ್ದ ಅಕ್ಕಿಯೊಂದಿಗೆ ತುಲನೆ ಮಾಡಿ ಇದು ಮಾದರಿ ಅಕ್ಕಿಗೆ ಸಾಮ್ಯತೆ ಇರುತ್ತದೆ ಎಂದು ತೋರಿಸಿರುತ್ತಾರೆಯೇ ಎಂದರೆ ಇಲ್ಲ. ಆಯಿಶ ಮತ್ತು ಹಸಿನಾರವರನ್ನು ವಿಚಾರಣೆ ಮಾಡಿರುತ್ತಾರೆಯೇ ಎಂದರೆ ಇಲ್ಲ.

ನಿಪಿ 2 ರಲ್ಲಿರುವ ಪಂಚರನ್ನು ಯಾರು ಕರೆದರು, ಎಲ್ಲಿಂದ ಕರೆ ತಂದರು ಎನ್ನುವ ಬಗ್ಗೆ ನಿಮಗೆ ಮಾಹಿತಿ ಇರುವುದಿಲ್ಲ ಎಂದರೆ ಹೌದು. ನಿಪಿ 2 ನ್ನು ಆ ಸಮಯಲ್ಲಿ ನೀವು ಓದಿ ನೋಡಿರುವುದಿಲ್ಲ ಎಂದರೆ ಓದಿ ನೋಡಿರುತ್ತೇನೆ. ನಿಪಿ 2 ರಲ್ಲಿ ತಿದ್ದುಪಡಿ ಮಾಡಿರುವುದು ನಿಮಗೆ ತಿಳಿದಿದೆಯೇ ಎಂದರೆ ಅದರ ಬಗ್ಗೆ ನನಗೆ ಅನುಭವ ಇಲ್ಲ. ನಿಪಿ 2 ನ್ನು ತಯಾರಿಸುವಾಗ ನೀವು ಇರಲಿಲ್ಲ, ಓದಿ ನೋಡಿರುವುದಿಲ್ಲ, ಸಹಿಯನ್ನು ಮಾಡಿರುವುದಿಲ್ಲ ಆದ್ದರಿಂದ ನಿಮಗೆ ತಿದ್ದುಪಡಿಯು ಬಗ್ಗೆ ಅನುಭವ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರವರ ಕೋರಿಕೆಯ ಮೇರೆಗೆ ನೀವು ಠಾಣೆಯಲ್ಲಿ ಸಹಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಎಷ್ಟು ಗಂಟೆಯ ಕಾಲ ಅಲ್ಲಿ ನೀವು ಇದ್ದೀರಿ ಎಂದರೆ ಸಂಜೆ 6.30 ರಿಂದ ರಾತ್ರಿ 10.15 ರವರೆಗೆ ಅಲ್ಲಿ ಇದ್ದೆವು. ನಿಪಿ 2 ನ್ನು ತಯಾರಿಸುವಾಗ ಮತ್ತು ನಿಪಿ 7 ನ್ನು ತೆಗೆಸುವಾಗ ನೀವು ಅಲ್ಲಿ ಇದ್ದೀರಾ ಎಂದರೆ ಹೌದು.

ನೀವು ಅಕ್ಕಿಯನ್ನು ತೂಕ ಮಾಡಿದ ಯಂತ್ರವನ್ನು ಎಲ್ಲಿಂದ ತಂದಿರುತ್ತೀರಿ ಎಂದರೆ ಅದರ ಬಗ್ಗೆ ನನಗೆ ತಿಳಿದಿಲ್ಲ. ಸ್ಥಳದ ಚಕ್ಕುಬಂದಿಯನ್ನು ನಿಮಗೆ ಹೇಳಲು ಆಗುತ್ತದೆಯೇ ಎಂದರೆ ಸರಿಯಾಗಿ ನೆನಪಿಲ್ಲ. ನಿಪಿ 7ರಲ್ಲಿ ಮನೆಯ ಹೆಸರು ಕಾಣುವುದಿಲ್ಲ ಎಂದರೆ ಹೌದು. ನಿಪಿ 7ರಲ್ಲಿ ಕಾಣುವ ಚೀಲಗಳಲ್ಲಿ



ಪಂಚನಾಮೆಯ ಕಾಲಕ್ಕೆ ತನಿಖಾಧಿಕಾರಿಯವರು, ಪಂಚರು ಸಹಿ ಮಾಡಿರುವ ಚೀಟಿಯನ್ನು ಅಂಟಿಸಿರುವುದು ಮತ್ತು ಸೀಲು ಮಾಡಿರುವುದು ಕಾಣುವುದಿಲ್ಲ ಎಂದರೆ ಹೌದು.

ನಿಪಿ 2ನ್ನು ತಯಾರಿಸುವಾಗ ತೆಗೆದಿದೆ ಎನ್ನುವ ನಿಪಿ 7ರಲ್ಲಿ ದಾಳಿಯಲ್ಲಿ ಭಾಗವಹಿಸಿದ ಯಾವುದೇ ಅಧಿಕಾರಿಗಳು, ದಾಳಿಗೆ ಸಹಕರಿಸಿದ ಯಾವುದೇ ವ್ಯಕ್ತಿಗಳು ಕಾಣುವುದಿಲ್ಲ ಎಂದರೆ ಸರಿ. ನಿಪಿ 2ಕ್ಕೂ ನಿಪಿ 7ಕ್ಕೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಿಪಿ 7ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿರುವುದು ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯುಲ್ಲಿ ಹೇಳಿರುವ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಿಪಿ 7ರಲ್ಲಿ ಕಾಣವ ವಸ್ತುಗಳಿಗೂ ಮೂ ಮಾ 1 ಮತ್ತು 2ಕ್ಕೂ ಹಾಗೂ ಆರೋಪಿ ಯವರಿಗೂ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ಚಾಸಾ 2ರವರು ನಿಮ್ಮ ಮೇಲಾಧಿಕಾರಿಗಳು ಆಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.